**<u>ದಿನಾಂಕಃ 02.03.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು</u>.**

**ಪಾಟೀ ಸವಾಲುಃ- ಶ್ರೀ ಡಿ ಕೆ ಎಂ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಿಮಗೆ ಈಗ 70 ವರ್ಷ ವಯಸ್ಸು ಆಗಿದೆ ಎಂದರೆ ಸಾಕ್ಷಿ ನನಗೆ 65 ವರ್ಷಗಳು ಆಗಿವೆ ಎನ್ನುತ್ತಾರೆ. ನಿಮ್ಮ ಮದುವೆ ಯಾವ ಸಾಲಿನಲ್ಲಿ ಆಯಿತು ಎಂದರೆ ಸಾಕ್ಷಿ 1973 ರಲ್ಲಿ ಎನ್ನುತ್ತಾರೆ. ನಿಮ್ಮ ತಂದೆ ಮುಂದೆ ನಿಂತು ಮದುವೆ ಮಾಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ನನ್ನ ಅಣ್ಣ ಬಾಲಕೃಷ್ಣ ಮುಂದೆ ನಿಂತು ಮದುವೆ ಮಾಡಿದರು ಎನ್ನುತ್ತಾರೆ. ಮದುವೆ ಆದಾಗಿನಿಂದ ಗಂಡನ ಮನೆಯಲ್ಲೇ ನೀವು ವಾಸ ಇದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆ 1996 ನೇ ಇಸವಿಯಲ್ಲಿ ತೀರಿಕೊಂಡಿದ್ದಾರೆ.

ಈ ದಾವೆಯನ್ನ ನನ್ನ 6 ಜನ ಅಣ್ಣತಮ್ಮಂದಿರ ವಿರುದ್ಧ ಹೂಡಿದ್ದೇನೆ ಬೇರೆ ಯಾರ ವಿರದ್ಧವೂ ಹೂಡಿಲ್ಲ. ನಿಮ್ಮ ತಂದೆಗೆ ನಿಮ್ಮ ತಾತನಿಂದ ಎಷ್ಟು ಆಸ್ತಿಗಳು ಬಂದಿದ್ದವು ಎಂದರೆ ಸಾಕ್ಷಿ ಸುಮಾರು 30 ರಿಂದ 40 ಎಕರೆ ಆಸ್ತಿ ಬಂದಿತ್ತು ಎನ್ನುತ್ತಾರೆ. ಯಾವ ಯಾವ ಸರ್ವೆ ನಂಬರ್ ಗಳಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಬಂದಿದ್ದವು ಎಂದು ಹೇಳಲಾಗುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಬೇರೆ ಸಹೋದರಿಯರಾದ 7 ಮತ್ತು 8 ನೇ ಪ್ರತಿವಾದಿಗಳ ಮದುವೆಯನ್ನ ಯಾರು ಮಾಡಿದರು ಎಂದರೆ ಸಾಕ್ಷಿ ನನ್ನ ಅಣ್ಣ ಕೆ. ಪಿ. ಬಾಲಕೃಷ್ಣ ರವರೇ ಮಾಡಿದ್ದಾರೆ ಎನ್ನುತ್ತಾರೆ. ಆ ಇಬ್ಬರು ಸಹೋದರಿಯರು ಮದುವೆ ಆದ ಮೇಲೆ ಗಂಡನ ಮನೆಯಲ್ಲೇ ವಾಸ ಇದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಮದುವೆ ಆಗಿ ಹೊದ ಮೇಲೆ ನಿಮ್ಮ ತಂದೆಯ ಮನೆಯಲ್ಲಿ ಏನೇನು ವ್ಯವಹಾರಗಳು ನಡೆದಿವೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

ನಿಮ್ಮ ತಂದೆ ಬದುಕಿದ್ದಾಗ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಅವರ ಕುಟುಂಬದ safety ಗಾಗಿ ಜಮೀನುಗಳನ್ನು ಹಂಚಿಕೊಂಡಿದ್ದರು ಎನ್ನುತ್ತಾರೆ. ನಿಮ್ಮ ತಂದೆ

ಇದ್ದಾಗಲೇ ಹಾಗೆ ಹಂಚಿಕೊಂಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ನಮ್ಮ ತಂದೆ ತೀರಿಕೊಂಡ ನಂತರ ಹಂಚಿಕೊಂಡಿದ್ದರು ಎನ್ನುತ್ತಾರೆ. ಹಾಗೆ ಹಂಚಿಕೊಂಡ ಆಸ್ತಿಗಳನ್ನ ಅವರವರೇ ನೋಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಹಾಗೆ ಹಂಚಿಕೊಂಡ ಜಮೀನುಗಳ ಖಾತೆಗಳನ್ನ ಕೂಡ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಕೆ . ಪಿ. ಬಾಲಕೃಷ್ಣ ಎನ್ನುವವರಿಗೆ ಪ್ರದೀಪ ಮತ್ತು ಶ್ವೇತ ಎನ್ನುವ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಬಾಲಕೃಷ್ಣ ರವರ ಮಕ್ಕಳೂ ಕೂಡ ಆಸ್ತಿಗಳನ್ನ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡು ಸುಮಾರು ಒಂದು ಅಥವಾ ಎರಡು ವರ್ಷಗಳಲ್ಲಿ ಹಾಗೆ ಆಸ್ತಿಗಳನ್ನ ಹಂಚಿಕೊಂಡಿದ್ದಾರೆ. 1 ನೇ ಪ್ರತಿವಾದಿ ಕೆ . ಪಿ. ಬಾಲಕೃಷ್ಣ ಅವರಿಗೆ ಬಂದ ಆಸ್ತಿಪಿಗಳನ್ನ ಅವರ ಮಕ್ಕಳ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಈ ದಾವೆಯನ್ನ ಯಾವ ಸರ್ವೆ ನಂಬರ್ ಜಮೀನುಗಳಿಗೆ ಹಾಕಿದ್ದೀರಿ ಎಂದು ಹೇಳಲು ಆಗುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವುಗಳ ವಿಸ್ತೀರ್ಣ ಮತ್ತು ಚೆಕ್ಕು ಬಂದಿ ನಿಮಗೆ ಹೇಳಲು ಆಗುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗಳ ಖಾತೆಗಳು ಯಾರ ಹೆಸರುಗಳಿಗೆ ಇದೆ ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹಾಜರು ಮಾಡಿರುವ ದಾಖಲೆಗಳನ್ನ ನಿಮಗೆ ಯಾರು ತರಿಸಿಕೊಟ್ಟರು ಎಂದರೆ ಸಾಕ್ಷಿ ನನ್ನ ಮಕ್ಕಳು ತಂದು ಕೊಟ್ಟಿದ್ದಾರೆ ಎನ್ನುತ್ತಾರೆ. ನಿಮ್ಮ ಗಂಡನ ಮನೆಯಲ್ಲಿ ನಿಮಗೆ ಎಷ್ಟು ಆಸ್ತಿ ಇದೆ ಎಂದರೆ ಸಾಕ್ಷಿ ಹೆಚ್ಚು ಕಡಿಮೆ 15 ಎಕರೆ ಜಮೀನು ಇರಬಹುದೇನೋ ಎನ್ನುತ್ತಾರೆ. ನೀವು ಹಾಜರು ಮಾಡಿರುವ ದಾಖಲೆಗಳು 1 ನೇ ಪ್ರತಿವಾದಿಯ ಮಕ್ಕಳುಗಳ ಹೆಸರುಗಳಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಕೆ . ಪಿ. ಬಾಲಕೃಷ್ಣ ರವರ ಮಕ್ಕಳನ್ನ ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಮಾಡಿಲ್ಲ ಎಂದರೆ ಸಾಕ್ಷಿ ಅವರ

ಹೆಸರಿಗೆ ಜಮೀನು ಮಾಡಿಕೊಟ್ಟಿರುವುದು ನಮಗೆ ಗೊತ್ತಿರಲಿಲ್ಲ ಎನ್ನುತ್ತಾರೆ.

2 ರಿಂದ 6 ನೇ ಪ್ರತಿವಾದಿಗಳು ವಿಶ್ವಾಸದಿಂದ ಇದ್ದಾರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಇತ್ತಿಚೆಗೆ 3 ನೇ ಪ್ರತಿವಾದಿ ಕೆ. ಪಿ ಮಂಜೆಗೌಡ ತೀರಿಕೊಂಡರು ಎಂದರೆ ಸಾಕ್ಷಿ ಹೌದು ಎನ್ನುತತ್ತಾರೆ. ಅವರಿಗೆ ಹೆಂಡತಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. 2 ರಿಂದ 6 ನೇ ಪ್ರತಿವಾದಿಗಳು ಅವರು ಹಂಚಿಕೊಂಡ ಕೆಲವು ಆಸ್ತಿಗಳನ್ನ ಮಾರಾಟ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರು ನೊಂದಾಯಿತ ಕ್ರಯಪತ್ರದಡಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅಣ್ಣತಮ್ಮಂದಿರು ಸೇರಿಕೊಂಡು ಮಾಡಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಜಮೀನುಗಳನ್ನ ಕೊಂಡುಕೊಂಡಿರುವ ವ್ಯಕ್ತಿಗಳನ್ನ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಅಣ್ಣತಮ್ಮಂದಿರು ಅವರಿಗೆ ಬಂದ ಆಸ್ತಿಗಳನ್ನ ಬ್ಯಾಂಕ್ ಗೆ ಆದಾರ ಮಾಡಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಜಮೀನು ಮತ್ತು ಮನೆಗಳನ್ನು ಬಿಟ್ಟು ಬೇರೆ ಯಾವುದಾದರೂ ಚರಾಸ್ತಿಗಳ ಮೇಲೆ ಈ ದಾವೆಯನ್ನ ಹೂಡಿದ್ದೀರಾ ಎಂದರೆ ಸಾಕ್ಷಿ ಹೌದು ಎಲ್ಲಾ ಸ್ವತ್ತುಗಳ ಮೇಲೆ ಹಾಕಿದ್ದೇನೆ ಎನ್ನುತ್ತಾರೆ. ದಾವಾ ಐಟಂ ನಂಬರ್ 12 ಟ್ರ್ಯಾಕ್ಟರ್ ಎಂದು ಇದ್ದು ಆ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಟ್ರ್ಯಾಕ್ಟ್ಯರ್ ನಂಬರ್ ನನಗೆ ಮರೆತು ಹೋಗಿದೆ. ಸದರಿ ಟ್ರ್ಯಾಕ್ಟರ್ ಅಂಬುಜಾಕ್ಷಿ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಯಾರಿಗೆ ಗೊತ್ತು ಎನ್ನುತ್ತಾರೆ. ದಾವಾ ಐಟಂ ನಂ. 14 ಡಸ್ಟರ್ ಕಾರು ಮತ್ತು ಐಟಂ ನಂಬರ್ 15 ಹುಂಡಾಯ್ ಐ 20 ಕಾರು ಯಾರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ವಾಹನಗಳು 1 ನೇ ಪ್ರತಿವಾದಿ ಮಗ ಪ್ರದೀಪ್ ಹಸೆರಿನಲ್ಲಿ ಇದೆ ಎಂದರೆ ಸಾಕ್ಷಿ ಅವರ ಮಕ್ಕಳ ಹೆಸರಿನಲ್ಲಿ ತೆಗೆದುಕೊಂಡಿರಬಹುದು ಎನ್ನುತ್ತಾರೆ. ಆ ವಾಹನಗಳ ದಾಖಲೆಗಳನ್ನ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರಬಹುದೇನೋ

ಎನ್ನುತ್ತಾರೆ. 1 ನೇ ಪ್ರತಿವಾದಿ ಟ್ರಾಕ್ಟರ್ ತೆಗೆದುಕೊಂಡಂತೆ 2 ರಿಂದ 6 ನೇ ಪ್ರತಿವಾದಿಗಳು ಕೂಡ ಪ್ರತ್ಯೇಕವಾಗಿ ಟ್ರಾಕ್ಟರ್ ಗಳನ್ನು ಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಅವರೂ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ಆ ಟ್ರಾಕ್ಟರ್ ಗಳನ್ನ ಈ ದಾವೆಯಲ್ಲಿ ಸೆರೀಸಿಲ್ಲ ಎಂದರೆ ಸಾಕ್ಷಿ ಹೌದಾ ಸೇರಿಸಿಲ್ಲವಾ ಎನ್ನುತ್ತಾರೆ.

ಪ್ರದೀಪ್ ಕುಮಾರ್ ಮತ್ತು ಶ್ವೇತಾ ಈ ದಾವೆ ಹೂಡವ ಮೊದಲೇ ಅವರ ಹೆಸರಿನಲ್ಲಿ ಇದ್ದ ಜಮೀನುಗಳನ್ನ ನಂಜೇಗೌಡ ಮತ್ತು ಮೂರ್ತಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

6 ನೇ ಪ್ರತಿವಾದಿ ಬಲರಾಮೇಗೌಡ ಅವರ ಒಂದು ಆಸ್ತಿಯನ್ನ ದಿಃ 22.03.2014 ರಂದು ಅಯ್ಯಣ್ಣಚಾರಿ ಎನ್ನುವವರಿಗೆ ಕ್ರಯ ಪತ್ರದಡಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೆಲ್ಲಹಳ್ಳಿ ಸರ್ವೆ ನಂಬರ್ಃ 74 ರಲ್ಲಿ ಎಷ್ಟು ಎಕರೆ ಜಮೀನು ಇದೇ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ 10 ಎಕರೆ ಇರಬಹುದು ಎನ್ನುತ್ತಾರೆ. ಸದರಿ ಜಮೀನಿನಲ್ಲಿ 6 ನೇ ಪ್ರತಿವಾದಿ ಬಲರಾಮೇಗೌಡನಿಗೆ 5 ಎಕರೆ 24 ಗುಂಟೆ ಜಮೀನು ಬಂದಿತ್ತು ಎಂದರೆ ಸಾಕ್ಷಿ ಕರಿಕ್ಯಾತನಹಳ್ಳಿ ಮತ್ತು ಮೆಲ್ಲಹಳ್ಳಿ ಯಿಂದ ಒಟ್ಟು 10 ಎಕರೆ ಜಮೀನನ್ನ ಅವನಿಗೆ ಕೊಡಲಾಗಿತ್ತು ಎನ್ನುತ್ತಾರೆ. ಹಾಗೆ ಹಂಚಿಕೊಂಡ ಜಮೀನನ್ನ ಎಂ ಆರ್ ನಂಬರ್ 49-2000-01 ರಡಿ ಅವರ ಹೆಸರಿಗೆ ಖಾತೆಯನ್ನೂ ಕೂಡ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಜಮೀನಿನ ಪಹಣಿ ಅಯ್ಯಣ್ಣಚಾರಿ ರವರ ಹೆಸರಿನಲ್ಲೇ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ 6 ನೇ ಪ್ರತಿವಾದಿ ದಿಃ 04.07.2017 ರಂದು ಅವರ ಭಾಗದ ಕರಿಕ್ಯಾತನಹಳ್ಳಿಯ ಸರ್ವೆ ನಂಬರ್ಃ 24/3 ರಲ್ಲಿನ 1 ಎಕರೆ 8 ಗುಂಟೆ ಜಮೀನಿನನ್ನು ಪಂಕಜಾ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇನ್ನೂ ಕೆಲವಾರು ಆಸ್ತಿಗಳನ್ನ

ಬಲರಾಮೇಗೌಡರು ಮಾರಾಟ ಮಾಡಿದ್ದು ಅದರ ದಾಖಲೆಗಳು ನಮಗೆ ದೊರೆತಿಲ್ಲ ಆದರೆ ಮಾರಾಟ ಮಾಾಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಅದೇ ರೀತಿ 3 ನೇ ಪ್ರತಿವಾದಿ ಮಂಜೇಗೌಡ ಕೂಡ ಅವರಿಗೆ ಬಂದ ಆಸ್ತಿಯನ್ನ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ದಿಃ 25.07.2007 ರ ನೊಂದಾಯಿತ ಕ್ರಯ ಪತ್ರದ ಮೂಲಕ ಮಹೇಶ ಎನ್ನುವವರಿಗೆ ದಿಡಗ ಗ್ರಾಮದ ಸೈಟ್ ಒಂದನ್ನ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ 07.09.2006 ರಂದು 3 ನೇ ಪ್ರತಿವಾದಿ ಮಗೇಶ್ ಎನ್ನುವವರಿಗೆ ದಿಡಗದ ಒಂದು ಸೈಟನ್ನ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರ ಭಾಗದ ಉಳಿಕೆ ಆಸ್ತಿಗಳನ್ನ 3 ನೇ ಪ್ರತಿವಾ ಮತ್ತು ಅವರ ಮಕ್ಕಳು ದಿಃ 03.11.2011 ರ ಆದಾರ ಪತ್ರದಡಿ ಬ್ಯಾಂಕ್ ಗೆ ಆದಾರ ಮಾಡಿ ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದೇ ರೀತಿ 4 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಅವರಿಗೆ ಬದಂದ ಸ್ವತ್ತುಗಳನ್ನು ಬ್ಯಾಂಕ್ ಗೆ ಆದಾರ ಮಾಡಿ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ 21.02.2005 ರಂದು 2 ನೇ ಪ್ರತಿವಾದಿ ತನ್ನ ಭಾಗದ ಜಮೀನುಗಳನ್ನು ಬ್ಯಾಂಕ್ ಗೆ ಆದಾರ ಮಾಡಿ ಸಾಲ ಪಡೆದುಕೊಂಡಿದ್ದಾರೆ ಎಂರದೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.**

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ